VIJAYAKUMAR KANNUR
Digitally signed by VIJAYAKUMAR KANNUR
Date: 2025.10.28 17:15:21 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 28.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ LNS ವಕೀಲರಿಂದ :**

ನಾನು ಬಿ. ಕಾಂ ಪದವಿಧರನಾಗಿರುವೆನು. 2016 ರಿಂದ ನಾನು ಈ ಸೊಸೈಟಿಯಲ್ಲಿ ಸೇವೆ ಸಲ್ಲಿಸುತ್ತಿರುವೆನು. ನಾನು Recovery Assistant ಅಂತ ಕೆಲಸ ಮಾಡುತ್ತಿರುವೆನು. ಈ ಸೊಸೈಟಿಯ ಮುಖ್ಯ ಕಚೇರಿ ಬೈಲಹೊಂಗಲದಲ್ಲಿ ಇರುವುದು. ಈ ಮೊದಲು ನಾನು ಲೋಕಾಪೂರದ ಶಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದೇನು. ಈಗ ಬೇರೆ ಶಾಖೆಯಲ್ಲಿ ಕೆಲಸ ಮಾಡುತ್ತಿರುವೆನು. ನಾನು ಈ ಸೊಸೈಟಿಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿದಾಗಿನಿಂದ 2020 ರ ಜುಲೈ ತಿಂಗಳವರೆಗೆ ಲೋಕಪೂರ ಶಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದೇನು. ನಮ್ಮ ಸೊಸೈಟಿಯ ಶಾಖೆಯು ವ್ಯಾಪ್ತಿಯೊಳಗೆ ವಾಸವಾಗಿರುವ ಜನರಿಗೆ ಮಾತ್ರ ಸಾಲ ನೀಡುವುದಿಲ್ಲ, ಬೇರೆ ಜನರಿಗೂ ಸಹ ಸಾಲ ನೀಡುತ್ತೇವೆ. ನಮ್ಮ ಮುಖ್ಯ ಕಚೇರಿಯ ನಿರ್ದೇಶನದ ಮೇರೆಗೆ ಈ ಶಾಖಾ ಕಚೇರಿಯ 30 ರಿಂದ 40 ಕಿ. ಮೀ ವ್ಯಾಪ್ತಿಯಲ್ಲಿ ವಾಸವಾಗಿರುವ ವ್ಯಕ್ತಿಗಳಿಗೆ ಸಾಲ ನೀಡಬಹುದು.

2. ಈ ಆರೋಪಿಯು ನಮ್ಮ ಬ್ಯಾಂಕಿನಿಂದ ಸಾಲ ಪಡೆಯುವ ಪೂರ್ವದಲ್ಲಿ ಆತನ ಹೆಸರಿನಲ್ಲಿ ಇರುವ ಖುಲ್ಲಾ ಜಾಗೆಯನ್ನು ಅಡಮಾನ ಮಾಡಿಕೊಟ್ಟಿರುವುದರಿಂದ ಈ ಸಾಲ ಮಂಜೂರು ಮಾಡಿರುವೆವು. ಆರೋಪಿಗೆ ಒಟ್ಟು 8 ಲಕ್ಷ ಹಣವನ್ನು ಸಾಲವಾಗಿ ನೀಡಿರುವೆವು. ಒಬ್ಬ ವ್ಯಕ್ತಿ ನಮ್ಮ ಸೊಸೈಟಿಯಿಂದ ಸಾಲ ಪಡೆದುಕೊಂಡ ನಂತರ ಅದೇ ವ್ಯಕ್ತಿಗೆ ಇನ್ನೊಂದು ಬಾರಿ ಸಾಲ ನೀಡುವಿರಾ ಎಂಬ ಪ್ರಶ್ನೆಗೆ ಸಾಕ್ಷಿ ನುಡಿಯುವುದೇನೆಂದರೆ ಮೊದಲು ಪಡೆದ ಸಾಲ ಸಂಪೂರ್ಣವಾಗಿ ಸಂದಾಯ ಮಾಡಿದ್ದರೆ ಪುನಃ ಸಾಲ ನೀಡುತ್ತೇವೆ. ಆರೋಪಿಗೆ ನಮ್ಮ ಲೋಕಪೂರದ ಶಾಖೆಯನ್ನು ಹೊರತು ಪಡಿಸಿ ಬೇರೆ ಶಾಖೆಗಳಿಂದ ಒಟ್ಟು ಎಷ್ಟು ಹಣ

ಸಾಲವಾಗಿ ನೀಡಿರುವೆವು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿಗೆ ಸಾಲ ನೀಡುವ ಸಮಯದಲ್ಲಿ ಆತನ ಫೋಟೊ, ಆಧಾರ ಗುರುತಿನ ಚೀಟಿ, ಪಾನ್ ಕಾರ್ಡ, ಆಸ್ತಿಯ ಉತಾರ್, ಆಸ್ತಿಯ ಮಾರುಕಟ್ಟೆಯ ಮೌಲ್ಯ ದಾಖಲಾತಿ ಮತ್ತು ಜಾಮೀನು, ಬ್ಯಾಂಕ್ ಪಾಸ್ ಬುಕ್ ಮತ್ತು ಸ್ಟೆಟಮೆಂಟ್ ಈ ದಾಖಲೆಗಳನ್ನು, ಪಡೆದುಕೊಂಡು ಸಾಲ ಮಂಜೂರು ಮಾಡಿರುವೆವು.

3. 2018 ರಲ್ಲಿ ಈ ಸಾಲ ಮಂಜೂರು ಮಾಡಿರುವೆವು. ಆದರೆ ನಿರ್ದಿಷ್ಟವಾದ ತಿಂಗಳು ಮತ್ತು ದಿನಾಂಕ ನನಗೆ ನೆನಪಿರುವುದಿಲ್ಲ. ಈ ಮೇಲೆ ಹೇಳಿದ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುವೆವು. ಈ ಸಾಲ ನೀಡುವ ಸಮಯದಲ್ಲಿ ಆ ಹಣದ ಮೇಲೆ ಶೇ. 17 ರಷ್ಟು ಬಡ್ಡಿ ನೀಡಬೇಕಾಗುತ್ತದೆ ಎಂದು ಹೇಳಿರುವೆವು. ಈ ಬಡ್ಡಿಯನ್ನು ಕ್ರಮಬದ್ದವಾಗಿ ಸಂದಾಯ ಮಾಡುತ್ತಾ ಇರಬೇಕು, ಒಂದು ವೇಳೆ ಸಂದಾಯ ಮಾಡದೇ ಇದ್ದರೆ ಹೆಚ್ಚಿನ ಬಡ್ಡಿಯನ್ನು ಸಂದಾಯ ಮಾಡಬೇಕಾಗುವುದು. ಈ ಸಾಲದ ಕಂತುಗಳನ್ನು ಕಟ್ಟದೇ ಇದ್ದರೇ ಶೇ. 2 ರಷ್ಟು ಹೆಚ್ಚುವರಿ ಬಡ್ಡಿಯನ್ನು ಸಂದಾಯ ಮಾಡಬೇಕಾಗುವುದು. ಈ ಬಡ್ಡಿಯನ್ನು ವಿಧಿಸುವ ಪೂರ್ವದಲ್ಲಿ ಸೊಸೈಟಿಯ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ದರಿಸಿರುವರು. ಆಡಳಿತ ಮಂಡಳಿಯ ಠರಾವಿನ ದಾಖಲೆಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ. ಆರೋಪಿ ತಾನು ಪಡೆದಿರುವ ಸಾಲದ ಹಣದ ದಿನಾಂಕದಿಂದ ಇವತ್ತಿನವರೆಗೆ ಆತ ಕೆಲವೊಂದು ಸಾಲದ ಕಂತುಗಳನ್ನು ಸಂದಾಯ ಮಾಡಿರುವನು. ಆ ಸಂದಾಯ ಮಾಡಿರುವ ಸಾಲದ ಕಂತಿನ ಸ್ಟೆಟಮೆಂಟ್ ನ್ನು ನಾನು ಹಾಜರು ಪಡಿಸುತ್ತೇನೆ.

4. ದಿಃ 20.01.2020 ರಂದು ರೂ. 9,12,642/- ಸಂಬಂಧಪಟ್ಟಂತೆ ಆರೋಪಿ ನಿಪಿ 2 ರ ಚೆಕ್ ನ್ನು ನೀಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಕಡೆಯಿಂದ ದಾಖಲೆಗಳನ್ನು ನನ್ನ ನಮ್ಮ ಸೊಸೈಟಿಯ ಅಡಿಷನಲ್ ಮ್ಯಾನೇಜರ್ ತೆಗೆದುಕೊಳ್ಳುವರು. ಸಾಲ ನೀಡುವ ಸಮಯದಲ್ಲಿ ಆರೋಪಿಯ ಕಡೆಯಿಂದ State Bank of India, Lokapur ಶಾಖೆಯಿಂದ 10 ಖಾಲಿ ಚೆಕ್ ಗಳನ್ನು ತೆಗೆದುಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR

Digitally signed by VIJAYAKUMAR KANNUR
Date: 2025.10.28 17:15:27 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ